1/4

ANSWER KEY

SECOND YEAR HIGHER SECONDARY EXAMINATION MARCH 2025

PART - II

SUBJECT : KANNADA (LANGUAGE)

CODE NO : SY - 406 **VERSION: S**

80 SCORES **2 1/2 HOURS**

Q. NO	ANSWER KEY	SCORE	TOTAL SCORE
1	ಅ). ಕರೆಯೋಲೆ - ಆಮಂತ್ರಣ ಪತ್ರಿಕೆ ಆ). ಅಪ್ಪನೂ ಒಲೆಯುರಿಯೂ ಇ). ಬಚ್ಚಲ + ಒಲೆ = ಬಚ್ಚಲೊಲೆ, ಮಾವಿನ + ಎಲೆ = ಮಾವಿನೆಲೆ ಈ). ನಿರು - ಸಲಿಲ, ಜಲ ಉ). ಪೇಪರು - ಪತ್ರಿಕೆ	1 1 1+1 1+1 1+1	1 1 2 2 2
2	ಲೋಕೇಶ್	1	1
3	ಗಾಂಧಾರಿ	1	1
4	ಸುಬ್ಬಣ್ಣ	1	1
5	ಮರಕುಟುಕ	1	1
6	ಪುರಂದರದಾಸ	1	1
7	ಪ್ರಾಣ -ಹರಣ, ಯೋಗ - ಜೋಗ	1 + 1	2
8	ಮೈಯನ್ನು ತೊಳೆ - ಕ್ರಿಯಾ ಸಮಾಸ	1 + 1	2
9	ಪಿರಿದು - ಹಿರಿದು ಪಣ್ಣು - ಹಣ್ಣು	1 + 1	2
10	ಓದಲಾರೆ, ಓದುವುದಿಲ್ಲ, ಓದೆನು	1 + 1	2
11	ರಾಗವನ್ನು - ಅನ್ನು (ದ್ವಿತೀಯ), ಸಂತೋಷದಲ್ಲಿ - ಅಲ್ಲಿ (ಸಪ್ತಮಿ)	1 + 1	2

12	'ಕಣ್ಣೀರಲ್ಲಿ ಕೈತೊಳೆ' ಎಂಬ ಪದವನ್ನು ಬಳಸಿಕೊಂಡು ರಚಿಸಿದ ಅರ್ಥವತ್ತಾದ ವಾಕ್ಯ.	2	2
13	ಮಕ್ಕಳು ದೋಣಿ ಹತ್ತುತ್ತಿದ್ದಂತೆ ಪಡುದಿಕ್ಕಿನಿಂದ ಯಾರೋ "ಹೋಯ್ ಚೇನ್ನಣ್ಣ" ಎಂದು ಕರೆದರು. ಚೇನ್ನ ಅತ್ತ ತಿರುಗಿ ನೋಡಿದ. ಆಗ ಕುಂಜಪ್ಪನು "ಸ್ವಲ್ಪ ಈ ಕಡೆ ಬನ್ನಿ" ಎಂದನು.	3	3
14	ಹಂಸ, ಗಿಳಿ, ನವಿಲು, ಕೋಗಿಲೆ, ಚಕ್ರವಾಕ ಪಕ್ಷಿ . . . ಇತ್ಯಾದಿ	3	3
15	"ಮಾತನಾಡಬೇಡ ಮಗಾ . . . ತೊಟ್ಟಿಲಲ್ಲಿ ಮಲಗಿದ ಕೂಸು ಎದ್ದೀತು . . . ಈಗ ಕಥೆ ಕೇಳು . . . ಹೇಳುತ್ತೇನೆ. . ." "ಊಹು. . . ನನಗೆ ಕಥೆ ಬೇಡ . . . ಬೆಳಗಿನಿಂದ ಯಾಕೆ ಒಂದೇ ಸಮನೆ ಅಳುತ್ತಾ ಇದ್ದಿಯ ಹೇಳು . . ." "ನಿನಗೊಂದು ಹಿರೀಯ ಅಣ್ಣ ಇತ್ತು ಮಗಾ . . . . ಇವತ್ತು ಅದರ ಹುಟ್ಟಿದ ಹಬ್ಬ . . . "	3	3
16	ಕೊಟ್ಟಿರುವ ವಾಕ್ಯವನ್ನು ಅರ್ಥವತ್ತಾಗಿ ಕನ್ನಡಕ್ಕೆ ಭಾಷಾಂತರಿಸಿರಬೇಕು.	3	3
17	ಮಾತಿನ ಮಹತ್ವವನ್ನು ಸಾರುವ ತ್ರಿಪದಿ. - ಮಾತು ಅರ್ಥವತ್ತಾಗಿರಬೇಕು - ಅದು ಗುರಿಯ ತಾಗದ ಬಾಣದಂತಾಗಬಾರದು - ಅದು ಕೇಳುಗರಿಗೆ ಹಿತವೆನಿಸಬೇಕು. . . .	3	3
18	ನದಿಯ ಹತ್ತಿರ ಬಂದ ಕೆಲವರು ಪಿಟೀಲನ್ನು ಇರಿಸಿಕೊಂಡು ಕುಳಿತಿರುವ ನನನ್ನು ನೋಡಿ 'ಇವನ್ಯಾರೋ ಪಾಪ' ಎಂದುಕೊಂಡು ಹೋದರು. ಅದು ಯಾವುದನ್ನೂ ನಾನು ಗಮನಿಸಲಿಲ್ಲ. ಸ್ವಲ್ಪ ಹೊತ್ತಿನ ಮೇಲೆ ಬಂದ ಒಬ್ಬ ಹುಡುಗನು ನನ್ನ ಪಕ್ಕದಲ್ಲಿದ್ದ ಪಿಟೀಲನ್ನು ನೋಡಿ 'ಯಾವ ಊರು ಸ್ವಾಮಿ ನಿಮ್ಮದು' ಎಂದನು. ನಾನು ಬೇಸರದಿಂದ 'ಯಾವುದೋ ಊರು' ಎಂದೆನು.	4	4
19	ನಾಡಸಿರಿ - ಭೂರಮೆಯುಟ್ಟೊಲ್ಲದಿಟ್ಟ ದುಕೂಲದ ಸೀರೆಗಳಂತೆ ಊರ್ಮಿಳಾ - ಪಕ್ಷಿ ಹೃದಯದ ಬೇನೆಯರಿತು ಬಲು ಬರೆದವನು ಆಗದು ಎಂದು - ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ ಅವರವರ ದಾರಿ - ಮನೆಯಲ್ಲಿ ಎಪ್ಪತ್ತು ದಾಟಿದವರಿಬ್ಬರೇ	1 1 1 1	4
20	ಹಲವು ಕಾಲದಿಂದ ಶ್ರೀಮಂತರ ಶೋಷಣೆಗೆ ತುತ್ತಾದ ಜನರ ಹೋರಾಟದ ಚಿತ್ರಣ ಇಲ್ಲಿದೆ. - ಶ್ರೀಮಂತರ ವಿರುದ್ಧದ ಹೋರಾಟಕ್ಕೆ 'ಲಕ್ಷಾಂತರ ನಾಗರಹಾವುಗಳು ಹುತ್ತ ಬಿಟ್ಟು ಬಂದಂತೆ' ದಲಿತರು ಬರುತ್ತಿದ್ದಾರೆ. ತಮಗೆ ಅನ್ಯಾಯವನ್ನು ಮಾಡಿದವರು ಪಾತಾಳದಲ್ಲಿ, ಆಕಾಶದಲ್ಲಿ, ಬೀದಿಯಲ್ಲಿ, ಗಲ್ಲಿಯಲ್ಲಿ . . . ಎಲ್ಲೇ ಇದ್ದರೂ ಅವರನ್ನು ಹುಡುಕಿ ತೆಗೆದು	4	4

3/4

	ಹೋರಾಡುತ್ತಿದ್ದಾರೆ.		
21	ಉದ್ಯೋಗ ನಿಮಿತ್ತ ಹೆತ್ತವರಿಂದ ದೂರ ಉಳಿಯುವ ಮಕ್ಕಳು ಹಾಗೂ ಅವರ ಸಂಸಾರ - ವೃದ್ಧ ಮಾತಾ ಪಿತರ ಬದುಕು ಹಾಗೂ ಕೊರಗು - ಏಕಾಂಗಿತನ . . . ಇತ್ಯಾದಿಯಾಗಿ 'ಅವರವರ ದಾರಿ' ಕವನದ ಮುಖ್ಯ ವಿಚಾರಗಳನ್ನು ಸೇರಿಸಿಕೊಂಡು ಬರೆದ ಲಘು ಲೇಖನ.	4	4
22	ತಂತ್ರಜ್ಞಾನವಿದ್ದರೂ ಗುಣಮಟ್ಟದ ಕೊರತೆ - ಹಳೆಯ ಕಾಲದ ಸಿನೆಮಾದ ಮೌಲ್ಯ ಇಲ್ಲದಿರುವುದು. - ಉತ್ತಮ ಸಂದೇಶವನ್ನು ನೀಡುವ ಚಿತ್ರಗಳ ಕೊರತೆ - ಮೊಬೈಲ್ ಪ್ರಭಾವ - ಎಲ್ಲವೂ ಮನೆಯಲ್ಲೆ ಒಟಿಟಿ ಪ್ಲಾಟ್ ಫಾರ್ಮ್ ನಲ್ಲಿ ಲಭ್ಯವಾಗುತ್ತಿರುವುದು - ಟಿಕೆಟ್ ದರಗಳ ಹೆಚ್ಚಳ . . . ಇತ್ಯಾದಿ.	4	4
23	ಲೇಖಕರು ತಮ್ಮ ಸಾಕುನಾಯಿ ಕಿವಿಯೊಂದಿಗೆ ಕೆರೆಯ ಪರಿಸರದಲ್ಲಿ ಸುತ್ತಾಡಿದ್ದು - ಡೊಂಗರು ಕಪ್ಪೆಯನ್ನು ಕಂಡ ಕಿವಿ ಅದನ್ನು ಹಿಡಿಯಲು ಹೊರಟಿದ್ದು - ಪಿಚಕ್ಕನೆ ಕಪ್ಪೆಯ ಮೂತ್ರ ಕಿವಿಯ ಮೂತಿಗೆ ಹಾರಿದ್ದು - ಕಿವಿಯ ಶೋಚನೀಯ ಪರಿಸ್ಥಿತಿ. . .	4	4
24	ತಾಯಿ ಅಬ್ಬಕ್ಕಳು ಶೀನುವಿಗೆ ಹೇಳಿದ ಚೆಲುವನ ಕಥೆ - ತಾಯಿ ಅಬ್ಬಕ್ಕಳ ಎರಡನೆಯ ಮದುವೆಯನ್ನು ವಿರೋಧಿಸಿದ ಚೆಲುವ ಮನೆಬಿಟ್ಟು ಹೋಗಿರುವುದು. - ಮಗನ ಬರವಿಗಾಗಿ ಹಾತೊರೆಯುವ ಅಬ್ಬಕ್ಕ. - ಕ್ರೂರ ತಾಯಿಯ ಹೇಯ ಕೃತ್ಯವನ್ನು ನೆನೆದು ತಾನು ಅಪರಾಧಿ ಎಂದು ಕೊರಗುವುದು.	6	6
25	ಜಾಲಿಯ ಮರದ ನಿರರ್ಥಕತೆ - ದುರ್ಜನರ ಸ್ವಭಾವ - ಇವೆರಡರ ತುಲನೆ. ಜಾಲಿಯ ಮರದಂತೆ ದುರ್ಜನರು ಸಮಾಜಕ್ಕೆ ನಿಷ್ಪ್ರಯೋಜಕರು ಎಂಬುದರ ಸಮರ್ಥನೆ.	6	6
26	ಸುಬ್ಬಣ್ಣ ಬೈರಾಗಿಯಾಗಿ ತೊರೆಯಪುರಕ್ಕೆ ಬಂದುದು - ವೆಂಕಟ್ರಮಣ ಮತ್ತು ಸುಬ್ಬಣ್ಣನ ನಡುವಿನ ಭೇಟಿ - ಸುಬ್ಬಣ್ಣನ ಬಳಿ ಇದ್ದ ಪಿಟೀಲನ್ನು ನುಡಿಸಿರುವುದು - ವೈರಾಗ್ಯದಿಂದ ಸುಬ್ಬಣ್ಣ ಪಿಟೀಲನ್ನು ನದಿಗೆ ಎಸೆದದ್ದು - ಮರೆಯಲ್ಲಿ ನೋಡುತ್ತಿದ್ದ ವೆಂಕಟ್ರಮಣನಿಗೆ ಆದ ಬೇಸರ - ಪಿಟೀಲು ಇಲ್ಲದೆ ಪರಿತಪಿಸಿದ ಸುಬ್ಬಣ್ಣ - ಮರುದಿನ ಬೆಳಗ್ಗೆ ಪಿಟೀಲನ್ನು ತಂದು ಕೊಟ್ಟುದು - ಸುಬ್ಬಣ್ಣನ ಶಿಷ್ಯನಾಗಿ ಸೇವೆ ಮಾಡಿದುದು. . . .	6	6
27	ನೀಡಲಾದ ಶತಕದ ಸಾಲುಗಳ ಭಾವಾರ್ಥವನ್ನು ಬರೆದು ಲಂಚಗುಳಿತನದಿಂದ ಸಮಾಜವು ಹಾಳಾಗುತ್ತಿರುವುದನ್ನು ಕುರಿತು ಲಘು ಲೇಖನವನ್ನು	6	6

	ಬರೆದಿರಬೇಕು.		
28	ಎಡೆಬಿಡದೆ ಸುರಿದ ಮಳೆಯಿಂದ ಚೇನ್ನ ಪರಯನ ಮನೆ ಜಲಾವೃತಗೊಂಡದ್ದು - ಚೇನ್ನನ ಪರಿವಾರ ದೋಣಿಯ ಮೂಲಕ ಸುರಕ್ಷಿತ ಜಾಗಕ್ಕೆ ತೆರಳಿದ್ದು - ಗುಡಿಸಲಿನಲ್ಲಿ ಏಕಾಂಗಿಯಾಗಿ ಉಳಿದ ನಾಯಿ - ಜೀವಭಯ ಹಾಗೂ ಹಸಿವಿನಿಂದ ನರಳುವ ಅದರ ಶೋಚನೀಯ ಅವಸ್ಥೆ . . . ಇತ್ಯಾದಿ ಅಂಶಗಳೊಂದಿಗೆ 'ನೆರೆ' ಪಾಠದಲ್ಲಿ ನಿರೂಪಿತವಾದ ವಿಚಾರಗಳನ್ನು ಬರೆದಿರಬೇಕು ಅಥವಾ ವಿಶ್ವಾಮಿತ್ರನು ಸೃಷ್ಟಿಸಿದ ಕೃತಕ ಕಾಡ್ಗಿಚ್ಚು - ಹರಿಶ್ಚಂದ್ರ, ಸತ್ಯಕೀರ್ತಿ ಲೋಹಿತಾಶ್ವರ ತ್ಯಾಗ ಮನೋಭಾವ, ಚಮದ್ರಮತಿಯು ಅಗ್ನಿಗೆ ಹಾರಲು ಮುಂದಾಗುವುದು - ಅವಳ ಪಾತಿವ್ರತ್ಯ ಗುಣ . . . . ಹೀಗೆ 'ತರುಣ ಸೂರ್ಯಂ ಕತ್ತಲೆಯನೆ ಪೊಕ್ಕಂತಾಯ್ತು' ಕಾವ್ಯಭಾಗದಲ್ಲಿ ಬರುವ ಚಂದ್ರಮತಿಯ ಪಾತ್ರಚಿತ್ರಣ ಮಾಡಿರಬೇಕು.	8	8